ಸ್ವಲ್ಪ ಕಷ್ಟವಾಗಬಹುದು, ರಸ್ತೆಗಳಿಗೆ ತೋಟಗಳಿಗೆ ರಾತ್ರಿಯಲ್ಲಿ ಕೆಲವು ಬೆಳಿಗಳಿಗೆ ಸಹಕಾರಿ ಆಗಬಹುದು ರಾತ್ರಿ ವೇಳೆ ವಿದ್ಯುತ್ ಸರಬರಾಜು ಮಾಡುವುದರಿಂದ ರೈತರಿಗೂ ಅನುಕೂಲವಾಗುತ್ತದೆ, ಮಂಡಲಿಯವರಿಗೂ ಅನುಕೂಲವಾಗುತ್ತದೆ. ಬೆಳಿಗ್ಗೆ ಹೊತ್ತು ವೋಲ್ಟೇಜ್ ಕಡಿಮೆ ಆಗಿರುತ್ತದೆ. ೨೯ ರಂದು ಪವರ್ ರಿವ್ಯೂ ಕಮಿಟಿಯಲ್ಲಿ ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟು ಕೊಂಡು ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ರಾಮಯ್ಯ.—ಕರೆಂಟ್ ಅನ್ನು ಕೊಡಬೇಕಾದ ಸಮಯದಲ್ಲಿ ಸಹ ಕೊಡುವುದಿಲ್ಲ. ಇದರ ಬಗ್ಗೆ ಗಮನವನ್ನು ತಾವು ಹರಿಸಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಕೆಲವೊಂದು ತಾಂತ್ರಿಕ ಕಾರಣಕ್ಕೋಸ್ಕರ ಒಂದು ಗಂಟೆ. ಎರಡೂ ಗಂಟೆ ವಿದ್ಯುಚ್ಛಕ್ತಿ ಹೋಗುತ್ತದೆ. ಆ ತೊಂದರೆಯನ್ನು ಪರಿಹರಿಸುವುದಕ್ಕೆ ತಕ್ಕ ಪ್ರಯತ್ನವನ್ನು ಮಾಡುತ್ತೇವೆ.

ನಿಯಮ ೩೫೪ ರ ಮೇರೆಗೆ

(೧) ನೇತ್ರಾವತಿ ನದಿ ನೀರಿನ ಸರಬರಾಜನ್ನು ಕೃಷಿಕರಿಗೆ ನಿಲ್ಲಿಸುವುದರಿಂದ ತೊಂದರೆ

ಶ್ರೀ ವಿನಯ ಕುಮಾರ್ ಸೊರ್ಕೆ.—ಮಾನ್ಯ ಅಧ್ಯಕ್ಷರೇ, ನಮ್ಮ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರಿನಲ್ಲಿ ಕಾರ್ಪೊರೇಷನ್‌ನಿಂದ ನೀರು ಸರಬರಾಜು ಆಗಬೇಕು. ನೀರು ಸರಬರಾಜು, ಕುಮಾರಧಾರ, ನೇತ್ರಾವತಿಯಿಂದ ಆಗಬೇಕು. ಫೆಬ್ರುವರಿ ನಂತರ ಈ ನೀರು ಸರಬರಾಜನ್ನು ಡಿಸ್ಕನೆಕ್ಟ್ ಮಾಡುವ ದೃಷ್ಟಿಯಿದೆ. ಇದರಿಂದ ಕೃಷಿಕರಿಗೆ ಬಡವರಿಗೆ ತೊಂದರೆ ಆಗುತ್ತದೆ. ಡಿಸ್ಕನೆಕ್ಷನ್ ಮಾಡುವುದಿಲ್ಲ. ಎಂಬ ಆಶ್ವಾಸನೆಯನ್ನು ಮಾನ್ಯ ಸಚಿವರು ಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಹಿಂದಿನ ವರ್ಷ ಡಿಸ್ಕನೆಟ್ ಮಾಡಬೇಕೆಂಬ ವಿಚಾರ ಬಂದಿತ್ತು, ಇನ್ನು ಮುಂದೆ ಮಾಡುವುದಿಲ್ಲ.

(2) ಬೆಂಗಳೂರು ನಗರ ಕಾರ್ಪೋರೇಷನ್ನಿನ ವ್ಯಾಪ್ತಿಯಲ್ಲಿರುವ ನಿವೇಶನಗಳಲ್ಲಿ ಮನೆಗಳನ್ನು ಕಟ್ಟುವಾಗ ಬೆಟರ್‌ಮೆಂಟ್ ಚಾರ್ಜು ವಿಧಿಸುವುದು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರ ಕಾರ್ಪೊರೇಷನ್ ವ್ಯಾಪ್ತಿಯಲ್ಲಿರುವ ಖಾಲಿಯಿರುವ ನಿವೇಶನಗಳಲ್ಲಿ ಮನೆ ಕಟ್ಟಲು ಲೈಸೆನ್ಸ್ ಕೇಳಿದಾಗ ಬೆಟರ್‌ಮೆಂಟ್ ಚಾರ್ಜು ಎಂದು ಒಂದು ನಿವೇಶನಕ್ಕೆ ಮನೆ ಕಟ್ಟುವ ಹಾಗಿದ್ದರೆ ಮೀಟರಿಗೆ ಐದು ರೂಪಾಯಿ, ವರ್ಕ್‌ಶಾಪ್ ಇಡುವ ಹಾಗಿದ್ದರೆ ಹತ್ತು ರೂಪಾಯಿ, ಅಂಗಡಿ ಅಥವಾ ಹೋಟೆಲಾದರೆ ಇಪ್ಪತ್ತೈದು ರೂಪಾಯಿಗಳನ್ನು ಹಾಕಿರುವ ಶುಲ್ಕ ತುಂಬಾ ಅನ್ಯಾಯ ಕಟ್ಟುವ ಜಾಗ ಸ್ವಲ್ಪವಿದ್ದರೂ ಅದನ್ನು ಪರಿಗಣಿಸದೆ ಒಟ್ಟು ನಿವೇಶನದ ವಿಸ್ತೀರ್ಣಕ್ಕೆಲ್ಲ ಶುಲ್ಕ ವಿಧಿಸುವುದು ನ್ಯಾಯ ನೀತಿಗೆ ವಿರೋಧವಾಗಿದೆ. ಈ ಬಗ್ಗೆ ಜನತೆಯ ಪ್ರತಿಭಟನೆಯನ್ನು ಸೂಚಿಸಿದ್ದಾರೆ ಈ ನೀತಿಯನ್ನು ಪುನರ್ ವಿಮರ್ಶಿಸುವುದಾಗಿ ಸರ್ಕಾರ ಮತ್ತು ನಗರ ಕಾರ್ಪೊರೇಷನ್‌ರವರು ಒಪ್ಪಿಕೊಂಡಿದ್ದರೂ ಪುನರ್ ವಿಮರ್ಶಿಸಿದ ಕಾರಣ, ಸಾವಿರಾರು ಜನ ತಮ್ಮ ಮನೆಗಳನ್ನು ಕಟ್ಟಿದೆ. ಕಟ್ಟಿಡದ ಕೆಲಸಗಳು ಸ್ಥಗಿತಗೊಂಡಿದೆ. ಸರ್ಕಾರ ಈ ನೀತಿಯನ್ನು ಮತ್ತು ನಿಯಮವನ್ನು ಪುನರ್ ವಿಮರ್ಶಿಸಿ ಮೊದಲು ಅನುಸರಿಸಿದ ನೀತಿ ನಿಯಮಗಳ ಪ್ರಕಾರ ಕಟ್ಟಿಡಗಳನ್ನು ಕಟ್ಟಲು ಅನುಮತಿ ನೀಡುವುದು ನ್ಯಾಯ ಸಮ್ಮತವಾಗಿರುವುದರಿಂದ ಈ ಬಗ್ಗೆ ಸರ್ಕಾರ ತನ್ನ ಹೇಳಿಕೆಯನ್ನು ಸದನಕ್ಕೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಈಗ ಸದಸ್ಯರು ಹೇಳಿದ ಹಾಗೆ ಅಭಿವೃದ್ಧಿ ಶುಲ್ಕ ಬೆಟರ್‌ಮೆಂಟ್ ಛಾರ್ಜ್ ಇದುವರೆಗೆ ನಿವೇಶನ ಎಷ್ಟು ಅಳತೆ ಇತ್ತೋ ಆದರ ಮೇಲೆ ಹಾಕಲಾಗುತ್ತಿತ್ತು. ೧ ಅಥವಾ ೨ ರೂಮ್ ಇದ್ದು ಸಂದರ್ಭದಲ್ಲಿ ಪೂರ್ಣವಾಗಿ ನಿವೇಶನಕ್ಕೆ ಹಾಕಿದ್ದರೆ ಶುಲ್ಕ ಹೆಚ್ಚು ಆಗುತ್ತದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ. ನಾವು ಇದರ ಬಗ್ಗೆ ಈಗಾಗಲೇ